ಇ.ಪಿ ನಂಃ **2/2024**
ಪಿ ಡಬ್ಲ್ಯೂಃ **1**

ದಿನಾಂಕಃ 23-10-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರ ಪರವಾಗಿ ಶ್ರೀ ಸಿ ಎಸ್ ಎಂ ಪಿ ವಕೀಲರಿಂದಃ

ನಾನು 1 ಅಥವಾ 2 ನೇ ತರಗತಿ ವರೆಗೆ ಮಾತ್ರ ಓದಿರುತ್ತೇನೆ. ಅರ್ಜಿಯಲ್ಲಿ ಬರೆದಿರುವ ಅಂಶಗಳ ಬಗ್ಗೆ ನಿಮಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ, ನನ್ನ ವಕೀಲರಿಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ ಮಾರ್ತಾಂಡಪ್ಪ ರವರಿಗೆ ನಾವು ಮೂರು ಜನ ಮಕ್ಕಳಿರುತ್ತೇವೆ. ಬಾಬು ಹಾಗೂ ರಾಜಶೇಖರ ನನ್ನ ಸಹೋದರರಾಗಿರುತ್ತಾರೆ. ನನ್ನ ಆಸ್ತಿಯ ಒಟ್ಟು ವಿಸ್ತೀರ್ಣ 70 x 90 ಅಡಿ ಇರುತ್ತದೆ. ಸದರಿ ಒಟ್ಟು ವಿಸ್ತೀರ್ಣವನ್ನು ವಾದ ಪತ್ರದಲ್ಲಾಗಲಿ ಅಥವಾ ಅರ್ಜಿಯಲ್ಲಾಗಲಿ ಬರೆಸಿಲ್ಲ ಎಂದರೆ ಸರಿ. ವಾದ ಪತ್ರದೊಂದಿಗಿನ ನಕಾಶೆಯಲ್ಲಿಯೂ ಸಹ ನನ್ನ ಆಸ್ತಿಯ ಒಟ್ಟು ವಿಸ್ತೀರ್ಣವನ್ನು ನಮೂದು ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪ್ರತಿವಾದಿಯರು ಒತ್ತುವರಿ ಮಾಡಿದ ಉದ್ದೇಶದ ಬಗ್ಗೆ ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವೆಯಲ್ಲಿನ ನಿಪಿ-1 ರ ಖಾತಾ ನಕಲಿನಲ್ಲಿಯೂ ಸಹ ನನ್ನ ಆಸ್ತಿಯ ಒಟ್ಟು ವಿಸ್ತೀರ್ಣ ನಮೂದು ಇರಲಿಲ್ಲ ಎಂದರೆ ಸರಿ.

2. ದಾವೆ ದಾಖಲು ಮಾಡುವ ಪೂರ್ವದಲ್ಲಿ ಪ್ರತಿವಾದಿಯರು ಒತ್ತುವರಿ ಮಾಡುತ್ತಿರುವ ಬಗ್ಗೆ ಪಂಚಾಯಿತಿಗೆ ಅರ್ಜಿ ನೀಡಿದ್ದೆನು. ಸದರಿ ಅರ್ಜಿಯ ಪ್ರತಿಯನ್ನು ಹಾಜರು ಮಾಡಿಲ್ಲ ಎಂದರೆ ಸಾಕ್ಷಿಯು ಅದು ನನ್ನ ವಕೀಲರಿಗೆ ಗೊತ್ತು ಎಂದು ನುಡಿಯುತ್ತಾರೆ. ನೀವು ಮುಂಬೈಯಲ್ಲಿ ವಾಸವಾಗಿರುತ್ತೀರಿ ಎಂದರೆ ಸಾಕ್ಷಿಯು ಮುಂಬೈ ಹಾಗೂ ಬಳಿಚಕ್ರ ಎರಡೂ ಕಡೆಗಳಲ್ಲಿ ವಾಸವಾಗಿರುತ್ತೇನೆ ಎಂದು ನುಡಿಯುತ್ತಾರೆ. ದಾವೆ ದಾಖಲಿಸುವ ಪೂರ್ವದಲ್ಲಿಯೇ ಪ್ರತಿವಾದಿಯರು ಮನೆ ಕಟ್ಟಿದ್ದರು ಎಂದರೆ ಸಾಕ್ಷಿಯು ಸರಿಯಲ್ಲ, ನನ್ನ ಪರವಾಗಿ ಡಿಕ್ರಿಯಾದ ನಂತರ ಮನೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯರ ಮನೆ ನಿರ್ಮಾಣ ಹಂತದಲ್ಲಿ ಇರುವುದರ ಪೋಟೊವನ್ನು ನಾನು ಹಾಜರು ಮಾಡಿದ್ದೇನೆ. ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಿ ಪ್ರತಿವಾದಿಯರು 08.05.2020 ರ ಪೂರ್ವದಲ್ಲಿಯೇ ತಮ್ಮ ಮನೆ ಕಟ್ಟಡ ಪೂರ್ಣಗೊಳಿಸಿ

11-ಇ ನಕಾಶೆ ನೀಡುವಂತೆ ದಿಃ 28.05.2020 ರಂದು ಪಂಚಾಯಿತಿಗೆ ಅರ್ಜಿ ನೀಡಿದ್ದರು ಎಂದರೆ ಸಾಕ್ಷಿಯು ದಾವೆ ಡಿಕ್ರಿಯಾದ ನಂತರ ಮನೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯರ ಮನೆ ಕಟ್ಟಡ ಪೂರ್ಣಗೊಂಡ ನಂತರ ನಾನು ದಾವೆ ದಾಖಲು ಮಾಡಿದ್ದರಿಂದ ದಾವೆಯು ಊರ್ಜಿತವಾಗಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ನನ್ನ ಆಸ್ತಿಯಲ್ಲಿ ಯಾವುದೇ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನ್ನ ಇಬ್ಬರು ಸಹೋದರರಿಗೂ ಸಹ ಪಾಲು ಇದೆ. ನಾನು ನನ್ನ ಅಣ್ಣ-ತಮ್ಮಂದಿರಿಗೆ ಮೋಸ ಮಾಡುವ ಉದ್ದೇಶದಿಂದ ಅವರನ್ನು ದಾವೆ ಮತ್ತು ಈ ಅರ್ಜಿಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

3. ನನ್ನ ತಂದೆ ಗ್ರಾಮದಲ್ಲಿ ಎರಡು ಮನೆಗಳನ್ನು ಹೊಂದಿದ್ದರು. ನಾನು ಹಳೆಯ ಮನೆಗೆ ಸಂಬಂಧಿಸಿದಂತೆ ದಾವೆ ದಾಖಲು ಮಾಡಿದ್ದೆನು. ಪಂಚಾಯಿತಿ ನಂಬರು 8-122 ನಿಮ್ಮ ಹಳೆ ಮನೆಯ ಆಸ್ತಿ ನಂಬರು ಆಗಿರುವುದಿಲ್ಲ ಎಂದರೆ ಸಾಕ್ಷಿಯು ಅದು ನನ್ನ ವಕೀಲರಿಗೆ ಗೊತ್ತು ಎಂದು ನುಡಿಯುತ್ತಾರೆ. ನಾನು ಸುಳ್ಳು ದಾವೆ ದಾಖಲಿಸಿ ಡಿಕ್ರಿ ಪಡೆದುಕೊಂಡಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ**.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ